# ಮಾತನಾಡುವ ಮರಗಳು

■ ನಾಗರಾಜ ಎಂ. ಹುಡೇದ
ಚಿತ್ರ: ಮಂಜುನಾಥ ಹುಲಕೊಪ್ಪದ

ಇದು ನೂರಾರು ವರ್ಷಗಳ ಹಿಂದಿನ ವಿಷಯ. ಗದುಗಿನ ಗುಂಡಣ್ಣ ಹಡಗಿನಲ್ಲಿ ವರುಷಕ್ಕೊಂದು ಸಲ ವಿದೇಶಕ್ಕೆ ಪ್ರವಾಸ ಮಾಡುತಿದ್ದ. ಹಾಗೆಯೇ ಈ ವರ್ಷವೂ ಹಡಗೊಂದರಲ್ಲಿ ಪ್ರವಾಸ ಹೊರಟ. ಹಡಗು ಬಂದರಿನಿಂದ ಸುಮಾರು ಐವತ್ತು ನಾಟಿಕಲ್ ಮೈಲು ದೂರ ಸಾಗಿತು. ಭಯಂಕರವಾದ ಬಿರುಗಾಳಿ ಬೀಸಲಾರಂಭಿಸಿತು. ಹಡಗು ಆ ಕಡೆ ಈ ಕಡೆ ಓಲಾಡ ತೊಡಗಿತು. ಹಡಗಿನಲ್ಲಿದ್ದವರಿಗೆ ಜೀವಭಯ ಸುರುವಾಯಿತು. ಬಿರುಗಾಳಿಗೆ ಸಿಕ್ಕ ಹಡಗು ನಿಯಂತ್ರಣವನ್ನೂ ಕಳೆದುಕೊಂಡಿತು. ಹಡಗಿನಲ್ಲಿದ್ದವರು ರಕ್ಷಣೆಗಾಗಿ ಎಲ್ಲ ಕಡೆ ಕರೆ ಮಾಡಿದರೂ ಪ್ರಯೋಜನವಾಗಲಿಲ್ಲ. ಕರಾಳ ರಾತ್ರಿಯಾದ್ದರಿಂದ ಎತ್ತ ಹೋಗಬೇಕೆಂದು ತೋಚದಾಯಿತು. ಜೀವರಕ್ಷಕ ಧರಿಸಿ ಮುಳುಗುವ ಹಡಗಿನಿಂದ ಹೊರಗೆ ಧುಮುಕಿದರು. ಬಿರುಗಾಳಿಗೆ ಎತ್ತೆತ್ತಲೋ ತೇಲುತ್ತಾ ಹೋದರು. ಜೀವ ಕೈಯಲ್ಲಿ ಹಿಡಿದಿದ್ದ ಗುಂಡಣ್ಣ ಸಮುದ್ರದಲ್ಲಿಯ ಜಲಚರಗಳಿಗೆ ಬಲಿಯಾಗದಿದ್ದರೆ ಸಾಕೆಂದು ದೇವರಲ್ಲಿ ಪ್ರಾರ್ಥಿಸಿದ. ಯಾಕಂದ್ರ ದೊಡ್ಡ ಗಾತ್ರದ ತಿಮಿಂಗಲುಗಳು ಅನಾಯಾಸವಾಗಿ ನುಂಗಿಬಿಡಬಹುದು. ಇನ್ನೂ ಎಂಥೆಂಥ ವಿಚಿತ್ರ ಜಲಚರಗಳಿದ್ದಾವೆ. ಎಂಬುದು ಗುಂಡಣ್ಣನಿಗೆ ಗೊತ್ತಿತ್ತು. ಆ ಸಮುದ್ರದಲ್ಲಿ ಒಂದು ಕಡೆ ಬೆಚ್ಚಗಿನ ನೀರು, ಮತ್ತೊಂದು ಕಡೆ ಅತೀಯಾದ ಶೀತ ಇರುವ ನೀರನ್ನು ಕಂಡು ಮೂರ್ಛೆ ಹೋದ. ಕಡೆ ಕಡೆಗೆ ಜೀವದ ಆಸೆಯನ್ನೇ ಬಿಟ್ಟಿದ್ದ. ತೂಫಾನ್‌ಗೆ ಸಿಕ್ಕ ಗುಂಡಣ್ಣ ಬೆಳಗಾಗುವದರಲ್ಲಿ ಬಳ್ಳಿಮರಗಳಲ್ಲಿ ಬಂಧಿಯಾಗಿದ್ದ. ಮೂರ್ಛೆಯಿಂದ ಎಚ್ಚರವಾದ. ಎಲ್ಲಿದ್ದೇನೆಂಬುವುದೇ ಗೊತ್ತಾಗಲಿಲ್ಲ. ಬಳ್ಳಿಗಳು ಗಟ್ಟಿಯಾಗಿ ಸುತ್ತಿಕೊಂಡಿವೆ. ಮೈ ಬಿಡಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಸಾಧ್ಯವಾಗುವುದಿಲ್ಲ. ಅಲ್ಲಿ ಯಾರೋ ಮಾತನಾಡಿದಂತೆ ಕೇಳುತ್ತೆ, ಅರ್ಥವಾಗುತ್ತಿಲ್ಲ. ಆದರೆ ಮನುಷ್ಯರು ಯಾರೂ ಕಾಣುತ್ತಿಲ್ಲ. ಒಂದು ಕಡೆ ನಾನು ಜೀವಂತವಾಗಿ ಉಳಿದಿರುವುದನ್ನು ಖಾತ್ರಿ ಮಾಡಿಕೊಂಡ.

'ಪೆರು ಪೊತರು ಪೊ', 'ಪ್ಯಾ ಪ್ಯಾ ಪ್ಯಾ,' ಎಂಬ ಶಬ್ದ ತಾನಿರುವಲ್ಲಿಯೇ ಕೇಳಿ ಆಶ್ಚರ್ಯಚಕಿತನಾದ. ನಿಧಾನವಾಗಿ ಸುತ್ತಿಕೊಂಡ ಬಳ್ಳಿಗಳು ತನ್ನಿಂದ ತಾನೇ ಬಿಚ್ಚಿಕೊಂಡವು. ಸುಗಂಧ ಪರಿಮಳದ ವಾಸನೆ ಬರುತ್ತಿದೆ. ಮರಗಳು ನಡೆದುಕೊಂಡು ಬರುತ್ತಿವೆ. ಅದರ ಟೊಂಗೆಗಳೆಲ್ಲ ನಾವು ಛತ್ರಿ ಮಡಚಿದಂತೆ ಮಡಚಿಕೊಳ್ಳುತ್ತವೆ. ಬೇರುಗಳು ಬೇಕೆಂದೇನಿಲ್ಲ. ಮತ್ತೊಂದು ಮರದ ಬೇರಿಗೆ

